ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ**106/2025**

ಸಾಕ್ಷಿದಾರರ ಹೆಸರು ಃ ಶ್ರೀಮತಿ ಜ್ಯೋತಿ ಎನ್ ಎ ಸಿ.ಡಬ್ಲ್ಯೂ - 15
ಗಂಡನ ಹೆಸರು ಃ ಅಶೋಕ್ ಪಿ.ಡಬ್ಲ್ಯೂ -11
ವಯಸ್ಸು ಃ 50 ವರ್ಷ
ಉದ್ಯೋಗ ಃ ಪಿ ಎಸ್ ಐ, ಎನ್ ಆರ್ ಪುರ ಪೊಲೀಸ್ ಠಾಣೆ
ವಾಸಸ್ಥಳ ಃ ಎನ್ ಆರ್ ಪುರ.

ದಿನಾಂಕಃ **10/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ನಾನು 2023 ರಿಂದ ಇಲ್ಲಿಯವರೆಗೆ ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 16/08/2025 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಅದನ್ನು ನಮ್ಮ ಠಾಣಾ ಗುನ್ನಾ ಸಂಖ್ಯೆಃ 70/2025 ರಲ್ಲಿ ದಾಖಲಿಸಿಕೊಂಡು ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

2. ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ಆಡುವಳ್ಳಿ ಗ್ರಾಮದ ಸರ್ವೆ ನಂಃ 121/1 ರಲ್ಲಿರುವ ಚಿಕ್ಕಗ್ರಹಾರದ ಚಾಸಾ 1 ರವರ ಬಾಬ್ತು ಜಮೀನಿನಲ್ಲಿರುವ ಮನೆ ಹತ್ತಿರ ಹೋಗಿ ಪಂಚರಾದ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ವಿಷಯ ತಿಳಿಸಿ ಮತ್ತು ನೋಟೀಸು ಕೊಟ್ಟು ಅವರು ಒಪ್ಪಿಕೊಂಡ ಮೇರೆಗೆ ಚಾಸಾ 1 ರವರು ಇದೇ ಮನೆಯಲ್ಲಿ ಕಳ್ಳತನ ಆಗಿರುತ್ತದೆ ಎಂದು ತೋರಿಸಿದ ಮೇರೆಗೆ ಮನೆಯ ಮುಂಭಾಗದಲ್ಲಿ ಹಾಕಿದ್ದ ಬೀಗವನ್ನು ಯಾವುದೋ ಆಯುಧದಿಂದ ಮೀಟಿ ಬೀಗವನ್ನು ಒಡೆದು ಮನೆಯ ಒಳಗೆ ಪ್ರವೇಶ ಮಾಡಿ ಮನೆಯಲ್ಲಿಟ್ಟಿದ್ದ 11 ಸಾವಿರ ನಗದು, ಸುಮಾರು 5 ಗ್ರಾಮ್ ತೂಕದ ಬಂಗಾರದ ಉಂಗುರ, ಮನೆಯಲ್ಲಿದ್ದ 21 ಕೆ ಜಿ ತೂಕದ 2 ತಾಮ್ರದ ಹಂಡೆ ಹಾಗೂ 2 ಕೊಡಪಾನಗಳನ್ನು ಹಾಗೂ ಒಂದು ರೂಮಿನಲ್ಲಿಟ್ಟಿದ್ದ 12 ವ್ಯಾಟ್ ಸೋಲಾರ್ ಬ್ಯಾಟರಿ ಹಾಗೂ ಮನೆಯ ಮೇಲಿದ್ದ ಸೋಲಾರ್ ಪ್ಯಾನಲ್, ಅರ್ಧ ಹೆಚ್ ಪಿ ಕರೆಂಟ್ ಮೋಟರ್ ಹಾಗೂ ಗ್ಯಾಸ್ ಸಿಲಿಂಡರನ್ನು ಕಳ್ಳತನ ಮಾಡಿಕೊಂಡು ಹೋದ ಜಾಗ ಇದೇ ಎಂದು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಸಂಜೆ 6.00-7.00 ರವರೆಗೆ ಮಹಜರು ಮಾಡಿದ್ದು ಸದರಿ ಮಹಜರು ಮಾಡುವ ಕಾಲಕ್ಕೆ ಕೃತ್ಯ ಸ್ಥಳದ ಕಚ್ಚಾ ನಕಾಶೆ ತಯಾರಿಸಿ, ಭಾವಚಿತ್ರಗಳನ್ನು

ತೆಗೆಸಿರುತ್ತೇನೆ ಹಾಗೂ ಮಹಜರು ಮಾಡುವ ಕಾಲಕ್ಕೆ ಮನೆಯ ಮುಂದೆ ಬಿದ್ದಿದ್ದ ಒಂದು ಸ್ಟೀಲ್ ಬೀಗ ಹಾಗೂ ತುಂಡಾದ ಕೊಂಡಿಯನ್ನು ಹಾಗೂ 9 ಸೆಂ. ಮೀಟರ್ ಉದ್ದದ ಗೋದ್ರೇಜ್ ಬೀರುವಿನ ಹೆಬ್ಬೆರಳು ಗಾತ್ರದ ಮುರಿದ ಸ್ಟೀಲ್ ಲಾಕರ್ ರಾಡನ್ನು ಮುಂದಿನ ಕ್ರಮದ ಬಗ್ಗೆ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ನನ್ನ ಹಾಗೂ ಪಂಚರ ಹಾಗೂ ಪಿರ್ಯಾದಿದಾರರ ಸಹಿಯನ್ನು ಪಡೆದುಕೊಂಡಿರುತ್ತೇನೆ.

3. ನಂತರ ಸದರಿ ವಸ್ತುಗಳನ್ನು ನಮ್ಮ ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನಿವೇದನೆ ಮಾಡಿಕೊಂಡಿರುತ್ತೇನೆ. ನಂತರ ದಿ॥17/08/2025 ರಂದು ಈ ಕೇಸಿನ ಆರೋಪಿಯ ಪತ್ತೆಗಾಗಿ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ 12 ಮತ್ತು 13 ರವರನ್ನು ನೇಮಕ ಮಾಡಿದ್ದು, ಅದೇ ದಿನ ರಾತ್ರಿ 8.30 ಗಂಟೆಗೆ ಆರೋಪಿತರನ್ನು ಠಾಣೆಗೆ ತಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆ ಕಾಲಕ್ಕೆ ಅವರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿ॥ 18/08/2025 ರಂದು ಆರೋಪಿತರು ತಾವು ಕಳ್ಳತನ ಮಾಡಿದ ಜಾಗವನ್ನು ಮತ್ತು ಕಳ್ಳತನ ಮಾಡಿದ ವಸ್ತುಗಳನ್ನು ಮಾರಾಟ ಮಾಡಿದ ಜಾಗವನ್ನು ತೋರಿಸುತ್ತೇವೆ ಎಂದು ತಾವು ಸ್ವ ಇಚ್ಛೆ ಹೇಳಿಕೆಯನ್ನು ನೀಡಿದ ಮೇರೆಗೆ ಸದರಿಯವರು ಆಡುವಳ್ಳಿ ಗ್ರಾಮದ ಸರ್ವೆ ನಂ॥ 121/1 ರಲ್ಲಿ ಚಾಸಾ 1 ರವರ ಮನೆಯನ್ನು ತೋರಿಸಿದ್ದು ಪಂಚರಾದ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಅವರಿಗೆ ಘಟನೆ ಬಗ್ಗೆ ಮಾಹಿತಿ ನೀಡಿ ಅವರು ಒಪ್ಪಿಕೊಂಡ ಮೇರೆಗೆ ಅವರಿಗೆ ನೋಟೀಸು ಜಾರಿ ಮಾಡಿ, ಅವರ ಸಮಕ್ಷಮ ಮಹಜರು ಕ್ರಮವನ್ನು ಮ.12.20 ರಿಂದ 12.50 ವರೆಗೆ ಜರುಗಿಸಿರುತ್ತೇನೆ. ನಂತರ ಅವರು ತಾವು ಕೃತ್ಯಕ್ಕೆ ಬಳಸಿದ ಒಂದು ಕಬ್ಬಿಣದ ಸುತ್ತಿಗೆಯನ್ನು ತೋರಿಸಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ತಾವು ಕಳ್ಳತನ ಮಾಡಿದ್ದ ವಸ್ತುವನ್ನು ಮಾರಾಟ ಮಾಡಿದ್ದವರ ಮನೆಯನ್ನು ತೋರಿಸುವುದಾಗಿ ನುಡಿದಿದ್ದು ನಂತರ ನಾವು ಅಲ್ಲಿಂದ ಚಿಕ್ಕಗ್ರಹಾರದಲ್ಲಿರುವ ರಂಗಪ್ಪಗೌಡ ರವರ ಮನೆಗೆ ಹೋಗಿ ಅವರ ಮಗನಾದ ಚಾಸಾ 10 ರವರಿಗೆ ಗ್ಯಾಸ್ ಸಿಲಿಂಡರ್ ಹಾಗೂ ಸೋಲಾರ್ ಪ್ಯಾನಲ್ ಗಳನ್ನು ನೀಡಿರುತ್ತೇವೆಂದು ನುಡಿದಿದ್ದು ಅದನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಚಾಸಾ 10 ರವರು ಗ್ಯಾಸ್ ಸಿಲಿಂಡರ್ ಹಾಗೂ ಸೋಲಾರ್ ಪ್ಯಾನಲ್ ತೋರಿಸಿದ್ದು ಅದನ್ನು ಚಾಸಾ 1 ರವರು ತಮ್ಮದೇ ಎಂದು ಗುರುತಿಸಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದು ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಸದರಿ ಮಹಜರನ್ನು ಮ. 1.00-1.30 ಗಂಟೆಯವರೆಗೆ ಜರುಗಿಸಿರುತ್ತೇನೆ.

5. ನಂತರ ಸದರಿ ಆರೋಪಿತರು ಇನ್ನೂಳಿದ ವಸ್ತುಗಳನ್ನು ಗಡಿಗೇಶ್ವರ ಗ್ರಾಮದ ಮಹೇಶ್ ರವರಿಗೆ ಮಾರಾಟ ಮಾಡಿರುತ್ತೇನೆ ಎಂದು ತಾವು ಬಂದರೆ ಆ ಮನೆಯನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಅಲ್ಲಿಂದ ಗಡಿಗೇಶ್ವರ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು ಸದರಿ ಮನೆ ನಾಗರತ್ನ ಕೋಂ ಸದಾಶಿವ ರವರ ವಾಸದ ಮನೆಯಾಗಿದ್ದು ಆ ಮನೆಯಲ್ಲಿ ಮಹೇಶ್(ಚಾಸಾ 9 ) ಎನ್ನುವವರು ವಾಸವಿದ್ದು, ಇದೇ ಮನೆಯಲ್ಲಿ ತಾವು ಉಳಿದ ವಸ್ತುಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ್ದು ಸದರಿ ಮಹೇಶ್ ರವರು ಅವರಿಗೆ ಕೊಟ್ಟಿದ್ದ ಒಂದು ಇಸ್ತ್ರಿ ಪೆಟ್ಟಿಗೆ, ಗ್ಯಾಸ್ ಸ್ಟೌವ್ ಹಾಗೂ ಒಂದು ಚಾರ್ಜರ್ ಬ್ಯಾಟರಿ ಅನ್ನು ನಮ್ಮ ಸಮಕ್ಷಮ ಹಾಜರುಪಡಿಸಿದ್ದು ಅವುಗಳನ್ನು ಚಾಸಾ 1 ರವರು ತಮ್ಮ ಮನೆಯ ವಸ್ತುಗಳೆಂದು ಗುರುತಿಸಿದ್ದು, ಸದರಿ ಎಲ್ಲಾ ವಸ್ತುಗಳಿಗೆ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಸದರಿ ಮಹಜರನ್ನು ಮ. 1.35 ರಿಂದ 2.15 ವರೆಗೆ ಮಾಡಿ ಆ ಕಾಲಕ್ಕೆ ಭಾವಚಿತ್ರಗಳನ್ನು ತೆಗೆಸಿರುತ್ತೇನೆ ಹಾಗೂ ವಶಪಡಿಸಿಕೊಂಡ ವಸ್ತುಗಳನ್ನು ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದಿಸಿರುತ್ತೇನೆ. ನಂತರ ಆರೋಪಿತರು ತನಿಖೆಗೆ ಅವಶ್ಯಕತೆ ಇಲ್ಲದೇ ಇರುವ ಕಾರಣ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

6. ಅದೇ ದಿನ ಚಾಸಾ 14 ರವರಿಂದ ಕಲಂ 63(4)(ಸಿ) ಬಿ ಎಸ್ ಎ ರೀತ್ಯಾ ಪ್ರಮಾಣ ಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ಚಾಸಾ 1 ರವರ ಮರುಹೇಳಿಕೆ ಹಾಗೂ ಚಾಸಾ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಪ್ರಕರಣದ ಸಾಕ್ಷಿದಾರರಾದ ಚಾಸಾ 7 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.ದಿ: 25/08/2025 ರಂದು ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಪಿ ಡಿ ಓ ಆಡುವಳ್ಳಿ ಗ್ರಾಮ ಪಂಚಾಯ್ತಿಗೆ ದಾಖಲೆ ಒದಗಿಸುವಂತೆ ಮನವಿ ಮಾಡಿಕೊಂಡಿದ್ದು, ದಿ:18/10/2025 ರಂದು ಅವರು ನೀಡಿದ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈ ಪ್ರಕರಣದ ತನಿಖೆ ಮುಕ್ತಾಯವಾಗಿದ್ದರಿಂದ ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

7. ಸಾಕ್ಷಿಯು ತಾವು ಸ್ವೀಕರಿಸಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯ್ತು. ಸಾಕ್ಷಿಯು ದಿ: 16/08/2025 ರಂದು ಮಾಡಿದ ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು

ಗುರುತಿಸಲಾಯ್ತು. ಸಾಕ್ಷಿಯು ನಿಪಿ 2 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 3 ರಿಂದ 11 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ದಿಃ 18/08/2025 ರಂದು ಮಾಡಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 13(ಡಿ) ಎಂದು ಗುರುತಿಸಲಾಯ್ತು. ನಿಪಿ 13 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 14 ರಿಂದ 20 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 26 ಎಂದು, ಸಾಕ್ಷಿಯ ಸಹಿಯನ್ನು ನಿಪಿ 26(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ದಿಃ 25/08/2025 ರಂದು ಪಿ ಡಿ ಓ ಆಡುವಳ್ಳಿ ಗ್ರಾಮ ಪಂಚಾಯ್ತಿ ರವರಿಗೆ ದಾಖಲಾತಿ ನೀಡುವಂತೆ ಕೋರಿ ಸಲ್ಲಿಸಿದ ಮನವಿ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 27 ಎಂದು, ಸಾಕ್ಷಿಯ ಸಹಿಯನ್ನು ನಿಪಿ 27(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ದಿಃ 18/10/2025 ರಂದು ತಾವು ಸ್ವೀಕರಿಸಿದ ಸ್ಥಳ ದಾಖಲಾತಿ ಮಾಹಿತಿಯ 2 ಪ್ರತಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 28 ಎಂದು, ಸಾಕ್ಷಿಯ ಸಹಿಯನ್ನು ನಿಪಿ 28(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು 63(4)(ಸಿ) ಭಾರತೀಯ ಸಾಕ್ಷ್ಯಾ ಅಧಿನಿಯಮದಡಿ ಪಡೆದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 29 ಎಂದು, ಸಾಕ್ಷಿಯ ಸಹಿಯನ್ನು ನಿಪಿ 29(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ಚಾಸಾ 1 ರವರಿಗೆ ಬಿಡುಗಡೆ ಮಾಡುವ ವಸ್ತುಗಳನ್ನು ಬಿಡುಗಡೆ ಮಾಡುವ ಕಾಲಕ್ಕೆ ತೆಗೆದ 4 ಭಾವಚಿತ್ರಗಳು ಹಾಗೂ ಒಂದು ಸಿ ಡಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 30 ರಿಂದ 34 ಎಂದು ಗುರುತಿಸಲಾಯ್ತು. ನ್ಯಾಯಾಲಯದ ಮುಂದೆ ಮುದ್ದೆ ಮಾಲು 7 ಮತ್ತು 8 ಅನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.(ಆರೋಪಿತರು ಗೈರು ಹಾಜರಿದ್ದು, ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲವೆಂದು ಹೇಳಿರುತ್ತಾರೆ.)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ಡಿ ವಕೀಲರಿಂದಃ

ಚಾಸಾ 1 ರವರು ದೂರಿನಲ್ಲಿ ತಮ್ಮ ಮನೆಯಲ್ಲಿ ಕಳ್ಳತನ ಆದ ವಸ್ತುಗಳ ಬಗ್ಗೆ ಮತ್ತು ತಮ್ಮ ಮರುಹೇಳಿಕೆಯಲ್ಲಿ ತಮ್ಮ ಮನೆಯಲ್ಲಿ ಕಳ್ಳತನ ಆದ ವಸ್ತುಗಳ ಬಗ್ಗೆ ತದ್ವಿರುದ್ಧವಾಗಿ ಹೇಳಿರುತ್ತಾರೆ ಎಂದರೆ ಸರಿ. ನಾನು ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ಪಂಚರ ಸಮಕ್ಷಮ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಆರೋಪಿತರು ನನ್ನ ಸಮಕ್ಷಮ ಯಾವುದೇ ಸ್ವ ಇಚ್ಛಾ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕಳ್ಳತನವಾದ ವಸ್ತುಗಳನ್ನು

ಖರೀದಿಸುವವರನ್ನು ಆರೋಪಿತರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರಿಗೆ ಅದು ಕಳ್ಳತನದ ವಸ್ತುವೆಂದು ಗೊತ್ತಿಲ್ಲದ ಕಾರಣ ಸಾಕ್ಷಿದಾರರನ್ನಾಗಿ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಾನು ಆರೋಪಿತರ ಹೇಳಿಕೆಯ ಆಧಾರದ ಮೇಲೆ ವಸ್ತುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ನಾನು ಪಂಚರ ಸಮಕ್ಷಮ ಯಾವುದೇ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಸಾಕ್ಷಿದಾರರು ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಕೇಸಿಗೋಸ್ಕರ ಭಾವಚಿತ್ರಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕಳ್ಳತನ ಮಾಡದೇ ಇದ್ದರೂ ನಾನು ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ಪತ್ತೆಗಾಗಿ ನಾನು ಸಿಬ್ಬಂದಿಯನ್ನು ನೇಮಕ ಮಾಡಿರುತ್ತೇನೆ ಮತ್ತು ಅವರು ಆರೋಪಿತರನ್ನು ಪತ್ತೆ ಮಾಡಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಿರ್ಯಾದಿದಾರರು ನನ್ನ ಮುಂದೆ ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ